# 4 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,
# ತುಮಕೂರು-ಮಧುಗಿರಿ

**ಎಸ್.ಸಿ.ಸಂಖ್ಯೆ:** 5037/2023 ಪ್ರಾಸಾ-24
ಚಾಸಾ-19

ದಿನಾಂಕಃ 01-07-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

| | |
|---|---|
| **ಹೆಸರು** | ವಿಕ್ರಂಗೌಡ |
| **ತಂದೆಯ / ಗಂಡನ ಹೆಸರು** | ಹನುಮಂತರಾಯಪ್ಪ |
| **ವಯಸ್ಸು** | 32 |
| **ಉದ್ಯೋಗ** | ಆಯಿಲ್ ವ್ಯಾಪಾರ |
| **ವಾಸಸ್ಥಳ** | ಪಾವಗಡ |

**<u>ಮುಖ್ಯ ವಿಚಾರಣೆ ಸರ್ಕಾರಿ ಅಭಿಯೋಜಕರಿಂದ ಃ-</u>**

ನಿಪಿ-5 ರ ಮೇಲೆ ನನ್ನ ಸಹಿ ಇದೆ ಅದನ್ನು ಗುರುತಿಸುತ್ತೇನೆ ಸಾಕ್ಷಿ ಸಹಿಯನ್ನು ನಿಪಿ-5(ಜಿ) ಎಂದು ಗುರುತಿಸಲಾಯಿತು. ಸುಮಾರು 3 ವರ್ಷಗಳ ಹಿಂದೆ ಪಾವಗಡ ಸರ್ಕಾರಿ ಆಸ್ಪತ್ರೆಯ ಶವಗಾರದಲ್ಲಿ ಸಹಿ ಮಾಡಿರುತ್ತೇನೆ, ಆ ಸಮಯದಲ್ಲಿ ಒಂದು ಹೆಂಗಿಸಿನ ಶವ ಇತ್ತು. ಸದರಿ ಹೆಂಗಸಿನ ಹೆಸರು ಮತ್ತು ಅವಳ ಸಾವು ಯಾವ ಕಾರಣಕ್ಕೆ ಯಾರಿಂದ ಆಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ನಾನು ಸರಿಯಾಗಿ ಶವವನ್ನು ನೋಡಿರುವುದಿಲ್ಲ. ನಿಪಿ-6 ಮತ್ತು 7 ಪೊಟೋಗಳನ್ನು ನೋಡಿ ಶವವನ್ನು ಗುರುತಿಸಿರುತ್ತಾರೆ. ನಿಪಿ-6 ರಲ್ಲಿ ತಮ್ಮ ಇರುವಿಕೆಯನ್ನು ಗುರುತಿಸಿರುತ್ತಾರೆ. ಈ ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇರುವುದಿಲ್ಲ.

**(ಈ ಹಂತದಲ್ಲಿ ಮಾನ್ಯ ಪಿಪಿ ಯವರು ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ಕೋರಿದ್ದರಿಂದ ಅನುಮತಿಸಲಾಯಿತು)**

**<u>ಪಾಟೀಸವಾಲು ಮಾನ್ಯ ಸರ್ಕಾರಿ ಅಭಿಯೋಜಕರಿಂದ ಃ-</u>**

ದಿ. 16.08.2023 ರಂದು ಬೆಳಿಗ್ಗೆ 10.00 ರಿಂದ 1.00 ಗಂಟೆಯ ಸಮಯದಲ್ಲಿ ಮೃತ ಲಕ್ಷ್ಮೀ ರವರ ಶವ ಪಂಚನಾಮೆ ಮಾಡಿದ್ದು, ಆ ಕಾಲಕ್ಕೆ ಅವರ ಸಂಬಂಧಿಕರು ಇತರೆ ಸಾಕ್ಷಿದಾರರು ಹಾಜರಿದ್ದು ಲಕ್ಷ್ಮೀ ರವರ ಗಂಡ ರಾಮಾಂಜಿ ಆಕೆಯ ಶೀಲ ಶಂಕಿಸಿ ಆಕೆಯ ತಲೆಗೆ ಒಣೆಕೆಯಿಂದ ಹೊಡೆದು ಸಾಯಿಸಿರುತ್ತಾನೆ ಎಂದು ತಿಳಿಸಿದರು ಎಂದರೆ ನನಗೆ ಗೊತ್ತಿಲ್ಲ. ಆ ಸಮಯದಲ್ಲಿ ನಾನು , ಸಹಬಾಜ್ ಮತ್ತು ಮನ್ಸೂರ್ ಹಾಜರಿದ್ದರು ಎಂದರೆ ನನಗೆ ಗೊತ್ತಿಲ್ಲ. ಮೇಲ್ನೋಟಕ್ಕೆ ಕೊಲೆ ಆಗಿರುತ್ತದೆ ಎಂದು ಕಂಡುಬಂತು ಎಂರೆ ನನಗೆ ಗೊತ್ತಿಲ್ಲ ನಾನು ಶವ ಪರೀಶಿಲಿಸಿದ್ದು ನೋಡಿದ್ದು ಗಾಯಗಳು ಆಗಿರುವುದು ಕಂಡು ಬಂತು ಎಂದರೆ ಸರಿಯಲ್ಲ. ಎಲ್ಲಾ ವಿಚಾರ ಗೊತ್ತಿದ್ದರೂ ಕೂಡ ಆರೊಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ- ಆರೋಪಿ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ಹೇಳಿರುತ್ತಾರೆ.**

**ಮರುವಿಚಾರಣೆ ಇಲ್ಲ.**

(ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

**ಓ ತಿ ಹೇ ಸ ಇದೆ.**

**4 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ತುಮಕೂರು-ಮಧುಗಿರಿ.**